

(6ನೇ ಪುಟದಿಂದ)
ಬಾಂಗ್ಲಾದೇಶಗಳಲ್ಲಿ ಈ ಹಕ್ಕಿಗಳು ಕಂಡುಬರುತ್ತವೆ.

ವರ್ಣ ವೈವಿಧ್ಯತೆಯ ಹಿನ್ನೆಲೆಯಲ್ಲಿ ಇವುಗಳನ್ನು ಐದು ವರ್ಗಗಳಾಗಿ ವಿಂಗಡಿಸುತ್ತಾರೆ. ಅಪಾಯಕಾರಿ ಪ್ರಾಣಿ ಅಥವಾ ಪಕ್ಷಿಗಳನ್ನು ಕಂಡ ಕೂಡಲೇ ಕಿರುಚಿ ಗಲಾಟೆ ಮಾಡುವುದರಿಂದ 'ಗಲಾಟೆ ಹಕ್ಕಿ' ಎಂಬ ಹೆಸರೂ ಇದೆ. ಕೀಟ, ಹಣ್ಣುಗಳನ್ನು ತಿನ್ನುವ ಪಿಕಳಾರಗಳು ಸುರಕ್ಷಿತವೆನಿಸಿದರೆ ಮನೆಯ ಹತ್ತಿರವೇ ಹಾರಾಡುತ್ತ ಗೂಡುಗಳನ್ನೂ ನಿರ್ಮಿಸಿಬಿಡುತ್ತವೆ. ಫೆಬ್ರುವರಿಯಿಂದ ಅಗಸ್ಟ್‌ವರೆಗೆ ಇವುಗಳು ಗೂಡು ನಿರ್ಮಿಸುವ ಕಾಲ.

ಬುಲ್‌ಬುಲ್ ಹಕ್ಕಿಗಳ ಜಾತಕ ಜಾಲಾಡಿ ಗೂಡಿನ ನಿರ್ಮಾಣ ಮುಗಿಯುವುದನ್ನೇ ಕಾಯತೊಡಗಿದೆ. ನೋಡುತ್ತಿದ್ದಂತೆಯೇ ಒಂದೇ ವಾರದಲ್ಲಿ ಸಂಸಾರ ಶುರು ಮಾಡಿಯೇಬಿಟ್ಟವು. ಎರಡು ಮೊಟ್ಟೆಗಳನ್ನಿಟ್ಟು ಕಾವು ಕೊಡುವ ಕ್ರಿಯೆ ಎಡೆಬಿಡದೆ ನಡೆದು ಪುಟ್ಟ ಮರಿಗಳು ಹೊರಬಂದು ಕಣ್ಣು ಮುಚ್ಚಿಕೊಂಡೇ ಕೂಗಲು ಪ್ರಾರಂಭಿಸಿದವು! ಆಗಲೇ ಮೊದಲ ಅಪಾಯ ಆಗಮಿಸಿದ್ದು ಕಾಗೆಯ ರೂಪದಲ್ಲಿ. ಅಪ್ಪ-ಅಮ್ಮ ಮರಿಗಳಿಗೆ ಗುಟುಕು ತರಲು ಹೊರ ಹೋದಾಗ ಕಾಗೆ ಗೂಡಿನ ಬಳಿ ಸುಳಿಯತೊಡಗಿತು. ಕಾಗೆಯನ್ನು ದಿನಾಲೂ ಓಡಿಸುವ ಕೆಲಸ ನಿರ್ವಹಿಸುತ್ತಾ ಗುಟುಕು ನೀಡುವ ಫೋಟೋ ಹಿಡಿದೆ. ಅದನ್ನೂ ಹಕ್ಕಿಯ ಹಿಂಬದಿಯಿಂದಲೇ ಕ್ಲಿಕ್ಕಿಸಬೇಕಾಯಿತು. ಕಾಗೆಗಳನ್ನು ಹೆದರಿಸಲು ಕನ್ನಡಿ ಇಟ್ಟು, ಮರಿಗಳು ದೂರದಿಂದ ಕಾಣದಂತೆ ತುಳಸಿ ಗಿಡಕ್ಕೆ ಮರೆಗಳನ್ನು ನೇತು ಹಾಕಿದೆ.

ಕಣ್ಣು ಮುಚ್ಚಿಕೊಂಡೇ ಇರುವ ಮರಿಗಳಿಗೆ ಗಿಡ ಸ್ವಲ್ಪ ಅಲುಗಿದೊಡನೆ ಅಮ್ಮ ಬಂದದ್ದು ಗೊತ್ತಾಗಿ ಮೇಲೆದ್ದು ಬಾಯಿ ತೆರೆದು ಉಲಿಯುತ್ತಿದ್ದವು. ತಾಯಿ ಹಕ್ಕಿ ಒಂದೇ ಗುಟುಕನ್ನು ಒಬ್ಬರಿಗಾದ ನಂತರ ಮತ್ತೊಬ್ಬರಿಗೆ, ತೆರೆದ ಬಾಯಿಗೆ ಗಂಟಲವರೆಗೆ ತುರುಕಿ ತೆಗೆಯುತ್ತಿತ್ತು. ಎರಡೂ ಬುಲ್‌ಬುಲ್ ಹಕ್ಕಿಗಳು ಹೊರ ಹೋದಾಗ ಮರಿಗಳ ಫೋಟೋ ತೆಗೆದು ಗಿಡ ಮೆಲ್ಲನೆ



ಅಲುಗಿಸಿದೆ. ತಕ್ಷಣ ಮರಿಗಳೆರಡೂ ಎಚ್ಚೆತ್ತು, ಗುಟುಕಿಗಾಗಿ ಬಾಯ್ತೆರೆದು ಉಲಿಯತೊಡಗಿದವು!

ಎರಡು ವಾರಗಳಲ್ಲಿ ಮರಿಗಳು ದೊಡ್ಡವಾಗಿ ಗೂಡಿನಿಂದ ಮೇಲೆ ಬಂದು ಓಡಾಡಲು ತೊಡಗಿದವು. ತಾಯಿ ಹಕ್ಕಿ ಕೂಗುತ್ತ, ಗಿಡದಿಂದ ಗಿಡಕ್ಕೆ ಜಿಗಿಯುತ್ತ ಮರಿಗಳಿಗೆ ಹಾರುವುದನ್ನು ಕಲಿಸಿಯೇಬಿಟ್ಟಿತು. ಹಾರಲು ಕಲಿಯುತ್ತಾ ರೆಕ್ಕೆ ಬಲಿತೊಡನೆ ಮರಿಗಳು ಗೂಡು ತ್ಯಜಿಸಿ ಹೋಗಿಯೇಬಿಟ್ಟವು. ಬುಲ್‌ಬುಲ್ ಜೋಡಿಯೂ ಮತ್ತೆ ಆ ಗೂಡಿನತ್ತ ಸುಳಿಯಲೇ ಇಲ್ಲ. ಅವುಗಳ ಬಟ್ಟಲಾಕಾರದ ಗೂಡು ಮಾತ್ರ ಸ್ವಚ್ಛವಾಗಿತ್ತು.